# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1296** |
| ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| (ಅ) | ಶಿವಮೊಗ್ಗ ಜಿಲ್ಲೆಯ 7 ತಾಲ್ಲೂಕಿನಲ್ಲಿ ಅಕಾಲಿಕ ಮಳೆಯಿಂದಾಗಿ ಉಂಟಾದ ನಷ್ಟವೆಷ್ಟು; | ಶಿವಮೊಗ್ಗ ಜಿಲ್ಲೆಯ 7 ತಾಲ್ಲೂಕಿನಲ್ಲಿ ಅಕಾಲಿಕ ಮಳೆಯಿಂದ ರೂ.622.57 ಕೋಟಿ ನಷ್ಟವಾಗಿರುತ್ತದೆ. |
| (ಆ) | ಪ್ರತಿ ತಾಲ್ಲೂಕಿನಲ್ಲಿ ಅಕಾಲಿಕ ಮಳೆಯಿಂದಾದ ಮಾನವ ಹಾನಿ, ಜಾನುವಾರು ಹಾನಿ, ಮನೆ ಹಾನಿ, ಕೃಷಿ ಫಸಲು ಹಾಗೂ ತೋಟಗಳ ವಿವರವೆಷ್ಟು; ಪ್ರತಿ ಹೆಕ್ಟೇರ್‌ಗೆ ನೀಡುತ್ತಿರುವ ಪರಿಹಾರ ಧನವೆಷ್ಟು; | ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಅಕಾಲಿಕ ಮಳೆಯಿಂದಾದ ಮಾನವ ಹಾನಿ, ಜಾನುವಾರು ಹಾನಿ, ಮನೆ ಹಾನಿ, ಕೃಷಿ ಹಾಗೂ ತೋಟಗಾರಿಕೆ ಬೆಳಗಳ ಹಾನಿ ಮತ್ತು ಪರಿಹಾರ ನೀಡಲಾದ ಮೊತ್ತದ ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ.<br><br>ಶಿವಮೊಗ್ಗ ಜಿಲ್ಲೆಯಲ್ಲಿ 2019ನೇ ಸಾಲಿನ ಪ್ರವಾಹದಿಂದ ಬೆಳೆಹಾನಿಯಾದ ರೈತರಿಗೆ ಈ ಕೆಳಕಂಡ ದರದಲ್ಲಿ ಪರಿಹಾರ ತಂತ್ರಾಂಶದ ಮೂಲಕ ಇನ್‌ಪುಟ್ ಸಬ್ಸಿಡಿಯನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮಾ ಮಾಡಲಾಗಿರುತ್ತದೆ.<br><br>ಮಳೆಯಾಶ್ರಿತ ಬೆಳೆ – ಪ್ರತಿ ಹೆಕ್ಟೇರ್‌ಗೆ ರೂ.16,800/-<br>ನೀರಾವರಿ ಬೆಳೆ – ಪ್ರತಿ ಹೆಕ್ಟೇರ್‌ಗೆ ರೂ.23,500/-<br>ಬಹುವಾರ್ಷಿಕ ಬೆಳೆ– ಪ್ರತಿ ಹೆಕ್ಟೇರ್‌ಗೆ ರೂ.28,000/- |
| (ಇ) | ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಸರ್ಕಾರ ನೀಡಿದ ಪರಿಹಾರ ಧನವೆಷ್ಟು; ಫಲಾನುಭವಿಗಳ ವಿವರ ಪೂರ್ಣ ಮಾಹಿತಿಯೊಂದಿಗೆ ನೀಡುವುದು; | ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಸರ್ಕಾರ ನೀಡಿರುವ ಪರಿಹಾರ ಮೊತ್ತವನ್ನು **ಅನುಬಂಧ**ದಲ್ಲಿ ನೀಡಿದೆ.<br><br>ಫಲಾನುಭವಿಗಳ ಪೂರ್ಣ ಮಾಹಿತಿಯು http://parihara.karnataka.gov.in ವೆಬ್‌ಸೈಟ್ ನಲ್ಲಿ ಲಭ್ಯವಿದೆ. |
| (ಈ) | ಬಾಕಿ ಉಳಿಸಿಕೊಂಡಿರುವ ಪ್ರಕರಣಗಳೆಷ್ಟು; ಯಾವ ಯಾವ ಕಾರಣಕ್ಕಾಗಿ ಬಾಕಿ ಉಳಿದಿದೆ ಮತ್ತು ಅರ್ಜಿದಾರರ ವಿವರಗಳನ್ನು ನೀಡುವುದು? | ಮಾನವ ಹಾನಿ/ ಜಾನುವಾರು ಹಾನಿ ಮತ್ತು ನೆರೆ ಸಂತ್ರಸ್ಥ ಕುಟುಂಬಗಳಿಗೆ ಪ್ರಾರಂಭಿಕವಾಗಿ ನೀಡಲಾಗುವ ರೂ.10,000/-ಗಳ ಪರಿಹಾರ ಮೊತ್ತ ಪಾವತಿಸುವ ಪ್ರಕರಣಗಳು ಯಾವುದೂ ಬಾಕಿ ಇರುವುದಿಲ್ಲ.<br><br>ಉಳಿದಂತೆ, ಪ್ರವಾಹದಿಂದ ಮನೆಹಾನಿಯಾದ 121 ಪ್ರಕರಣಗಳಿಗೆ ತಾಂತ್ರಿಕ ಕಾರಣಗಳಿಂದ ಪರಿಹಾರ ನೀಡುವುದು ಬಾಕಿ ಉಳಿದಿದ್ದು, ತಾಂತ್ರಿಕ ಕಾರಣಗಳನ್ನು ಸರಿಪಡಿಸಲು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ ಇವರನ್ನು ಕೋರಲಾಗಿದೆ. |

ಕಂಇ 154 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

## ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1296 ಕ್ಕೆ ಅನುಬಂಧ

| ಕ್ರ ಸಂ | ತಾಲ್ಲೂಕು | ಮಾನವ ಹಾನಿ | | ಜಾನುವಾರು ಹಾನಿ | | ಮನೆ ಹಾನಿ | | ಕೃಷಿ ಬೆಳೆ ಮತ್ತು ತೋಟಗಾರಿಕೆ ಬೆಳೆ | | |
|---|---|---|---|---|---|---|---|---|---|---|
| | | ಮಾನವ ಹಾನಿ | ಪರಿಹಾರ ನೀಡಿದ ಮೊತ್ತ (Rs.Lakhs) | ಜಾನುವಾರು ಹಾನಿ | ಪರಿಹಾರ ನೀಡಿದ ಮೊತ್ತ (ರೂ ಲಕ್ಷಗಳಲ್ಲಿ) | ಮನೆ ಹಾನಿ | RGRHCL ರವರ ಮೂಲಕ ಪರಿಹಾರ ನೀಡಿದ ಮೊತ್ತ | ಕೃಷಿ ಬೆಳೆ (ಹೆ) | ತೋಟಗಾರಿಕೆ ಬೆಳೆ (ಹೆ) | ಪರಿಹಾರ ನೀಡಿದ ಮೊತ್ತ (ರೂ ಲಕ್ಷಗಳಲ್ಲಿ) |
| | 1 | 2 | 3 | 4 | 5 | 6 | 7 | 8 | 9 | 10 |
| 01 | ಶಿವಮೊಗ್ಗ | 03 | 21.00 | 6 | 1.52 | 2080 | 127215470 | 157 | 49.41 | 64.64 |
| 02 | ಭದ್ರಾವತಿ | 06* | 38.00 | 1 | 0.30 | 1330 | 38885000 | 245 | 1.40 | 15.13 |
| 03 | ತೀರ್ಥಹಳ್ಳಿ | 06 | 42.00 | 11 | 2.94 | 220 | 6685000 | 1093 | 3800 | 348.44 |
| 04 | ಸಾಗರ | 03 | 21.00 | 9 | 2.70 | 223 | 9387676 | 2550 | 4197 | 686.66 |
| 05 | ಸೊರಬ | 0 | 0 | 0 | 0 | 506 | 12100000 | 6595 | 1342 | 1765.67 |
| 06 | ಶಿಕಾರಿಪುರ | 0 | 0 | 0 | 0 | 517 | 6750000 | 4100 | 724 | 421.30 |
| 07 | ಹೊಸನಗರ | 0 | 0 | 8 | 1.71 | 242 | 4300000 | 833 | 4529 | 586.85 |
| | ಒಟ್ಟು | **18** | **122.00** | **35** | **9.17** | **5118** | **205323146** | **15573** | **14642.81** | **3888.71** |